# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** M/s JSW Renew Energy Limited ರವರಿಗೆ ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 15 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ :** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/JSWREL-15 MW/ Chitradurga/F-2017/2021/626, ದಿನಾಂಕ:04.02.2021

2) ಸರ್ಕಾರದ ದಿನಾಂಕ:10.02.2021 ರ ಹಂಚಿಕೆ ಸಮಿತಿ ಸಭೆ.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖೆ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s JSW Renew Energy Limited ರವರು ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ತಾಲ್ಲೂಕಿನ ತಮಟಕಲ್, ಗುಡ್ಡದರಂಗವ್ವನಹಳ್ಳಿ, ಗೊಲ್ಲರಹಟ್ಟಿ, ಮಲ್ಲಾಪುರ, ಗಾನಕಲ್ ಗುಡ್ಡ, ತಮಟಕಲ್, ಚನ್ನೇನಹಟ್ಟಿ, ಮಾರಘಟ್ಟ, ಐಯ್ಯನಹಳ್ಳಿ, ಕುರುಬರಹಟ್ಟಿ, ಕಟಾರಹಾಲು, ಐತೋಲು, ಸಿದ್ದರಹಳ್ಳಿ ಮತ್ತು ಗುಟ್ಟಿಹಾಲು ಗ್ರಾಮಗಳಲ್ಲಿ 15 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಘಟಕಕ್ಕೆ ಹಂಚಿಕೆ ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಿ ಅಗತ್ಯ ಮಾಹಿತಿಯೊಂದಿಗೆ ಹಂಚಿಕೆ ಸಮಿತಿ ಸಭೆಯಲ್ಲಿ ಮಂಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಹಂಚಿಕೆ ಸಮಿತಿಯು ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, M/s JSW Renew Energy Limited ರವರಿಗೆ ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ತಾಲ್ಲೂಕಿನ ತಮಟಕಲ್, ಗುಡ್ಡದರಂಗವ್ವನಹಳ್ಳಿ, ಗೊಲ್ಲರಹಟ್ಟಿ, ಮಲ್ಲಾಪುರ, ಗಾನಕಲ್ ಗುಡ್ಡ, ತಮಟಕಲ್, ಚನ್ನೇನಹಟ್ಟಿ, ಮಾರಘಟ್ಟ, ಐಯ್ಯನಹಳ್ಳಿ, ಕುರುಬರಹಟ್ಟಿ, ಕಟಾರಹಾಲು, ಐತೋಲು, ಸಿದ್ದರಹಳ್ಳಿ ಮತ್ತು ಗುಟ್ಟಿಹಾಲು ಗ್ರಾಮಗಳಲ್ಲಿ (ISTS) ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 15 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿದ್ದು, ಸದರಿ ಸ್ಥಳವು ಹಂಚಿಕೆಗೆ ಲಭ್ಯವಿರುತ್ತದೆ.

ಸದರಿಯವರು ಯೋಜನಾ ಸ್ಥಳದ ಒಟ್ಟು ವಿಸ್ತೀರ್ಣಕ್ಕೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಸದರಿಯವರು 500 ಕಿ.ವ್ಯಾ. ಸಾಮರ್ಥ್ಯದ 30 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಸದರಿಯವರು ಅಳವಡಿಸುವ ಪ್ರತಿ ವಿಂಡ್ ಟರ್ಬೈನ್‌ನ footprint ಜಾಗಕ್ಕೆ 4 ಎಕರೆಗಳಂತೆ ಒಟ್ಟು 120 ಎಕರೆ (4X30=120) ಜಮೀನನ್ನು ನೀಡಬಹುದಾಗಿರುತ್ತದೆ. ಆದಕಾರಣ ಯೋಜನೆಗೆ ಅಭಿವೃದ್ಧಿದಾರರು ಸಲ್ಲಿಸಿರುವ ಯೋಜನಾ ವಿಸ್ತೀರ್ಣದಲ್ಲಿ 120 ಎಕರೆ ಜಮೀನನ್ನು ಪರಿಗಣಿಸಿ ISTS ವರ್ಗದಡಿಯಲ್ಲಿ ಹಂಚಿಕೆ ಮಾಡಬಹುದಾಗಿದೆ. ಯೋಜನೆಗೆ ಬೇಕಾಗುವ ಜಮೀನನ್ನು ಪಡೆಯುವುದು ಮತ್ತು PGCIL ನಿಂದ Evacuation ನಿರಾಕ್ಷೇಪಣಾ ಪತ್ರ ಮತ್ತು LTA approval ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಷರತ್ತಿಗೊಳಪಟ್ಟು M/s JSW Renew Energy Limited ರವರಿಗೆ 15 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ISTS ವರ್ಗದಡಿಯಲ್ಲಿ ಹಂಚಿಕೆಗೆ ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

...2

**Geographical area description for 15 MW capacity wind power project of M/s JSW Renew Energy Limited**

| Sl. No. | Topo sheet No. | Capacity in MW | Villages/taluk and district | Geographical area description of the project |
|---|---|---|---|---|
| 1 | 57 B/7 | 15 MW (500 kW X 30Nos) | Katarahalu, Kurubarahatti, Aitolu, Ayyanahalli, Sadarahalli, Maraghatta, Gollarahatti, Guttinadu, Chennenahatti, Guddadarangavvana halli, Tamatakal, Ganakal Gudda and Mallapura villages, Chitradurga taluk, Chitradurga district | The proposed area is surrounded by the points A-B-C-D-A and held in the following Geographical co-ordinates as:<br><br>**Point A:**Lat:14°15'0"N, Long:76°18'7.01''E<br><br>**Point B:**Lat:14°17'28.33"N, Long:76°19'4.29''E<br><br>**Point C:** Lat:14°17'44.82"N, Long:76°23'47.44''E<br><br>**Point D:** Lat:14°15'0"N, Long: 76°25'0''E<br><br>Peaks: 703, 698, 713, 696, 707, 871, 703, 692 and 819m AMSL |
| | **Total** | **15 MW** | | |

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

<u>**ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 85 ಎನ್‌ಸಿಇ 2021**</u>
<u>**ಬೆಂಗಳೂರು, ದಿನಾಂಕ:15/07/2021**</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s JSW Renew Energy Limited ರವರಿಗೆ ಚಿತ್ರದುರ್ಗ ಜಿಲ್ಲೆಯ, ಚಿತ್ರದುರ್ಗ ತಾಲ್ಲೂಕಿನ ತಮಟಕಲ್, ಗುಡ್ಡದರಂಗವ್ವನಹಳ್ಳಿ, ಗೊಲ್ಲರಹಟ್ಟಿ, ಮಲ್ಲಾಪುರ, ಗಾನಕಲ್ ಗುಡ್ಡ, ತಮಟಕಲ್, ಚನ್ನೇನಹಟ್ಟಿ, ಮಾರಘಟ್ಟ, ಐಯ್ಯನಹಳ್ಳಿ, ಕುರುಬರಹಟ್ಟಿ, ಕಟಾರಹಾಲು, ಐತೋಲು, ಸಿದ್ದರಹಳ್ಳಿ ಮತ್ತು ಗುಟ್ಟಿಹಾಲು ಗ್ರಾಮಗಳಲ್ಲಿ 15 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಿ ಆದೇಶಿಸಿದೆ.

**Geographical area description for 15 MW capacity wind power project of M/s JSW Renew Energy Limited**

| Sl. No. | Topo sheet No. | Capacity in MW | Villages/taluk and district | Geographical area description of the project |
|---|---|---|---|---|
| 1 | 57 B/7 | 15 MW (500 kW X 30Nos) | Katarahalu, Kurubarahatti, Aitolu, Ayyanahalli, Sadarahalli, Maraghatta, Gollarahatti, | The proposed area is surrounded by the points A-B-C-D-A and held in the following Geographical co-ordinates as:<br><br>**Point A:**Lat:14°15'0"N, Long:76°18'7.01''E |